**ದಿನಾಂಕಃ 27-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಹೆಚ್.ಎ.ಪಿ., ವಕೀಲರಿಂದ**

ಹಳೆಯ ಖಾತೆ ಸಂಖ್ಯೆಃ 288 ರ ಮನೆಯ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಸದರಿ ಮನೆ 100 ವರ್ಷಕ್ಕಿಂತ ಹಿಂದಿನ ಮನೆಯಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಮನೆಯಲ್ಲಿ ಸುಮಾರು 50 ವರ್ಷದಿಂದ 60 ವರ್ಷಗಳ ಹಿಂದೆ ವಾದಿ ಹಾಗೂ ಪ್ರತಿವಾದಿ ಒಟ್ಟಿಗೆ ವಾಸವಾಗಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 1 ಮತ್ತು 2 ನೇ ವಾದಿಗಳು ಹಾಗೂ 3 ಮತ್ತು 4 ನೇ ಪ್ರತಿವಾದಿಗಳ ಮದುವೆ ಸಹಾ ಸದರಿ ಹಳೆಯ ಮನೆಯಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಹಳೆಯ ಮನೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ರವರ ಹೆಸರಿನಲ್ಲಿ ಇತ್ತು ಎಂದು ನಾನು ಕೇಳ್ಪಟ್ಟಿರುತ್ತೇನೆ. ಸದರಿ ಹಳೆಯ ಮನೆಯನ್ನು 1 ನೇ ಪ್ರತಿವಾದಿ ಹಾಗೂ ಅವರ ಅಣ್ಣ ವೆಂಕಟರಮಣಪ್ಪ ರವರ ಭಾಗ ಮಾಡಿಕೊಂಡಿದ್ದು ತಲಾ ಅರ್ಧ ಅರ್ಧ ಭಾಗದಷ್ಟು ಇಬ್ಬರಿಗೂ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು

ನುಡಿದಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಸದರಿ ಹಳೆಯ ಮನೆಯಲ್ಲಿ ವಾಸವಾಗಿದ್ದ ಸಮಯ ದಾವಾ ಎ ಷೆಡ್ಯೂಲ್ ನ 1 ನೇ ಐಟಂ ಆದ ಸರ್ವೇ ನಂ. 1/1 ರಲ್ಲಿ 2 portion ನ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸ್ವಯಾರ್ಜಿತವಾಗಿ ಖರೀದಿ ಮಾಡಿ ಮನೆ ಕಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಕಳೆದ 50 ವರ್ಷಗಳಿಂದ 1 ಮತ್ತು 3 ನೇ ಪ್ರತಿವಾದಿಗಳು ಹಾಗೂ ಅವರ ಮಕ್ಕಳು ಸದರಿ ಮನೆಯಲ್ಲಿ ದಾವಾ ಎ ಷೆಡ್ಯೂಲ್ ನ 1 ನೇ ಐಟಂ ನಲ್ಲಿ ಕಟ್ಟಿರುವ ಮನೆಯಲ್ಲೇ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಬೇರೆ ಬೇರೆಯಾಗಿ ವಾಸವಾಗಿದ್ದಾರೆ ಎಂದು ನುಡಿದಿರುತ್ತಾರೆ. ಇಬ್ಬರೂ ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸವಾಗಿದ್ದಾರೋ ಅಥವಾ ಮೌಖಿಕವಾಗಿ ಅವರವರ ಪಾಡಿಗೆ ಬೇರೆ ಬೇರೆ ವಾಸವಾಗಿದ್ದಾರಾ ಎಂದು ನನಗೆ ಗೊತ್ತಿರುವುದಿಲ್ಲ. ಸ.ನಂ. 1/1 ರ ಜಮೀನಿನಲ್ಲಿ 3 ನೇ ಪ್ರತಿವಾದಿ ಬೆಳೆ ಸಹಾ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವರ ಜೀವಿತ ಕಾಲದಲ್ಲೇ 2 ನೇ ವಾದಿರವರ ಮಕ್ಕಳಿಗೂ ಸಹಾ ಸ.ನಂ. 1/1 ರ ಜಮೀನಿನಲ್ಲಿ ಭಾಗ ಇದೆ ಎಂದು ಹೇಳಿ ಸ್ವಂತ ಜಮೀನನ್ನು ಮೊದಲೇ ಮೌಖಿಕವಾಗಿ ಬಿಟ್ಟುಕೊಟ್ಟಿದು 2 ನೇ ವಾದಿಯ ಮಕ್ಕಳು ಸಹಾ ಸದರಿ ಜಮೀನಿನಲ್ಲಿ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 1/1 ರ ಜಮೀನಿನಲ್ಲಿ ನಾನು ಒಬ್ಬನೇ ಸ್ವಾಧೀನಾನುಭೋಗದಲ್ಲಿ ಇರುತ್ತೇನೆ ಎಂದು ತೋರಿಸಲು ನನ್ನ ತಾತ ನನಗೆ ಮಾಡಿಕೊಟ್ಟ ದಾನಪತ್ರವನ್ನು

ಹಾಜರುಪಡಿಸಿರುತ್ತೇನೆ. ದಿನಾಂಕಃ 02.11.2009 ರಂದು 1 ನೇ ವಾದಿ ಅಕ್ಕಮ್ಮ, ಕೋನಪ್ಪ, ಸಂಜೀವಮ್ಮ, ಹನುಮಂತಪ್ಪ ಮತ್ತು ಜಯಮ್ಮ ರವರ ಮೇಲೆ ಭಾಗ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸ.ನಂ. 1/1 ಅನ್ನು ಹನುಮಂತಪ್ಪ ಹಾಗೂ ಪಿ. ಭೀಮಯ್ಯ ರವರು ಜಂಟಿಯಾಗಿ ಖರೀದಿಸಿರುತ್ತಾರೆ ಎಂದರೆ ಸರಿ. ಈ ದಾವೆ ಚಾಲ್ತಿಯಲ್ಲಿದ್ದ ಸಮಯವೇ 1 ನೇ ಪ್ರತಿವಾದಿಯಿಂದ ನಾನು ಸ.ನಂ. 1/1 ಜಮೀನಿಗೆ ದಾನಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಈ ದಾವೆ ಬಗ್ಗೆ ಸದರಿ ಸಮಯದಲ್ಲಿ ನನಗೆ ಯಾವುದೇ ಮಾಹಿತಿ ಇರಲಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ಆರೋಗ್ಯ ಸ್ಥಿತಿ ಸರಿಯಿಲ್ಲದ ಸಮಯ ನಾನು ಮೋಸದಿಂದ ನನ್ನ ಹೆಸರಿಗೆ ದಾನಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ತೀರಿಕೊಳ್ಳುವ 8 ತಿಂಗಳ ಹಿಂದಿನಿಂದ ನಾನು ಅಂಗವಿಕಲನಾದ ಕಾರಣ ನನಗೆ ಏನಾದರೂ ಒಂದು ಆಧಾರ ಮಾಡಬೇಕೆಂದು ಆ ಜಮೀನನ್ನು ನನಗೆ ಮಾಡಿಕೊಡಬೇಕು ಎಂದು ಹೇಳುತ್ತಿದ್ದರು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ತೀವ್ರ ಅಸ್ವಸ್ಥರಾಗಿದ್ದು ವೈ.ಎನ್. ಹೊಸಕೋಟೆ ಆಸ್ಪತ್ರೆಯಲ್ಲಿ ದಾಖಲಾಗಿದ್ದುಬುದ್ಧಿ ನೆನಪಿನ ಕಳೆದುಕೊಂಡಿದ್ದ ಸಮಯದಲ್ಲಿ ನಾನು ಪಾವಗಡದಿಂದ ಸಬ್ ರಿಜಿಸ್ಟ್ರಾರ್ ಅನ್ನು ಆಸ್ಪತ್ರೆಗೆ ಕರೆದುಕೊಂಡು ಬಂದು ದಾನಪತ್ರ ಮೋಸದಿಂದ

ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಆಸ್ಪತ್ರೆಗೆ ದಾಖಲಾಗಿದ್ದ ಸಮಯ ಸದರಿಯವರ ಬುದ್ಧಿಶಕ್ತಿ ಸರಿಯಾಗಿಯೇ ಇತ್ತು, ಸ್ವತಃ 1 ನೇ ಪ್ರತಿವಾದಿಯೇ ಒತ್ತಾಯದಿಂದ ಸಬ್ ರಿಜಿಸ್ಟ್ರಾರ್ ಅನ್ನು ಆಸ್ಪತ್ರೆಗೆ ಕರೆತರಲು ಕೋರಿಕೊಂಡು ಕಾರಣ ನಾನು ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ. ದಿನಾಂಕಃ 25.11.2009 ರಂದು ಸುಮಾರು ಸಂಜೆ 04.30 ರಿಂದ 05.00 ರ ಸಮಯದಲ್ಲಿ ದಾನಪತ್ರವನ್ನು ನೋಂದಾಯಿಸಲಾಗಿರುತ್ತದೆ. ಸದರಿ ದಾನಪತ್ರವನ್ನು ಆಸ್ಪತ್ರೆಯಲ್ಲಿ ಸಬ್ ರಿಜಿಸ್ಟ್ರಾರ್ ಸಮ್ಮುಖದಲ್ಲೇ ನೋಂದಾಯಿಸಲಾಗಿರುತ್ತದೆ. ಸಬ್ ರಿಜಿಸ್ಟ್ರಾರ್ ರವರು ಪಾವಗಡದಿಂದ ಎಷ್ಟು ಹೊತ್ತಿಗೆ ಹೊರಟು ಎಷ್ಟು ಹೊತ್ತಿಗೆ ವೈ.ಎನ್. ಹೊಸಕೋಟೆಯ ಆಸ್ಪತ್ರೆಗೆ ತಲುಪಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಸಂಜೆ 04.30 ರ ಸಮಯಕ್ಕೆ ಸಬ್ ರಿಜಿಸ್ಟ್ರಾರ್ ರವರು ಆಸ್ಪತ್ರೆಯಲ್ಲಿ ಇದ್ದರು. ನನಗೆ ನಿಖರವಾಗಿ ಯಾವ ಸಮಯಕ್ಕೆ ದಾನಪತ್ರ ನೋಂದಣಿಯಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ದಾನಪತ್ರವನ್ನು ನೋಂದಣಿ ಮಾಡಿಸುವ ಸಮಯ ನನ್ನ ತಂದೆ ಕೋನಪ್ಪ, ಮರಿದಾಸನಹಳ್ಳಿಯ ದೊಡ್ಡಯ್ಯ ರವರು, ಹನುಮಂತನಹಳ್ಳಿಯ ಹನುಮಂತರಾಯ ರವರು ಹಾಗೂ ವೀರಭದ್ರಪ್ಪ ರವರು ಇದ್ದರು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಿ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು **ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**